ಕರ್ನಾಟಕ ಸರ್ಕಾರ

ಕರ್ನಾಟಕ ಅರಣ್ಯ ಇಲಾಖೆ

## ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ರಾಯಚೂರು ಅರಣ್ಯ ವಿಭಾಗ, ರಾಯಚೂರು

ವಿಳಾಸ: ಕೋರ್ಟ ರಸ್ತೆ, ರಾಯಚೂರು-584101, ದೂರವಾಣಿ ಸಂಖ್ಯೆ: 08532-230029, ಈ-ಮೇಲ್: dcf.trcr@gmail.com

ಸಂ: ಎ6/ಸರ್ವೆ/JSW/ಸಿಆರ್-/2016-17 ದಿನಾಂಕ: 16-10-2017

ಗೆ,

JSW Steel Limited,
Vidyanagar works:
P.O. Vidyanagar-583275
Dist: Ballaary.

ಮಾನ್ಯರೇ,

ವಿಷಯ: Request for suitability report for the following identified land to transfer to Forest Department on behalf of JSW Steel Ltd. for raising of Compensatory afforestation-reg.

ಉಲ್ಲೇಖ:
1. JSW Steel Limited, Vidyanagar works: Dist: Ballaary. ಇವರ ಪತ್ರದ ದಿನಾಂಕ: 13-05-2017.
2. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಯಚೂರು ಇವರ ಪತ್ರ ಸಂಖ್ಯೆ: ಸಅಸಂ/ರಾಉವಿ/ಲಿಂ.ವ/ಸಿಆರ್/2016-17ದಿನಾಂಕ:28-09-2017.
3. ವಲಯ ಅರಣ್ಯ ಅಧಿಕಾರಿಗಳು, ಲಿಂಗಸೂಗೂರು ಇವರ ಪತ್ರ ಸಂಖ್ಯೆ: ವಅಅ/ಲಿಂ.ವ/ಸಿಆರ್-/2016-17, ದಿನಾಂಕ: 22-8-2016

\- \- \-

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ (1) ರ ಪ್ರಕಾರ ನೀವು ಲಿಂಗಸುಗೂರು ವಲಯದ ಮುದಗಲ್ ಹೋಬಳಿಯ ಬಗ್ಗಲಗುಡ್ಡ ಗ್ರಾಮ ಪಟ್ಟಾ ಜಮೀನು ಸರ್ವೆ ನಂ. 67 ವಿಸ್ತೀರ್ಣ ಪೈಕಿ ಒಟ್ಟು 15 ಎಕರೆ 08 ಗುಂಟೆ ಜಮೀನಿನಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಹಾಗೂ ಸದರಿ ಪಟ್ಟಾ ಭೂಮಿಯನ್ನು ಅರಣ್ಯ ಇಲಾಖೆಗೆ ವರ್ಗಾಯಿಸಲು ಉದ್ದೇಶಿಸಿದ್ದು ಸದರಿ ಸರ್ವೆ ನಂಬರ್ ಜಮೀನು ಅರಣ್ಯೀಕರಣಕ್ಕೆ ಯೋಗ್ಯವೇ ಎಂಬ ಬಗ್ಗೆ ವರದಿಯನ್ನು ನೀಡಲು ಕೋರಿರುತ್ತೀರಿ.

ಈ ಬಗ್ಗೆ ವಲಯ ಅರಣ್ಯ ಅಧಿಕಾರಿಗಳು ಲಿಂಗಸುಗೂರು ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ರಾಯಚೂರು ಇವರು ಸ್ಥಳ ಪರಿಶೀಲನೆ ಮಾಡಿ ಕ್ರಮವಾಗಿ ಉಲ್ಲೇಖ (2) ಮತ್ತು (3) ರ ಪತ್ರಗಳ ಪ್ರಕಾರ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ಬಗ್ಗಲಗುಡ್ಡ ಗ್ರಾಮ ಪಟ್ಟಾ ಜಮೀನು ಸರ್ವೆ ನಂ. 67 ಒಟ್ಟು ವಿಸ್ತೀರ್ಣ ಪಹಣಿ ಪತ್ರಿಕೆಯ ಪ್ರಕಾರ 15 ಎಕರೆ 08 ಗುಂಟೆ ಇದ್ದು, ಸದರಿ ಪ್ರದೇಶವು ಬಗ್ಗಲಗುಡ್ಡ ಸರ್ವೆ ನಂ. 28ರ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಿದ್ದು ಸದರಿ ಪ್ರದೇಶದಲ್ಲಿ ವಿವಿಧ ಮಾದರಿಯಡಿ ಅರಣ್ಯೀಕರಣ ಕಾಮಗಾರಿ ಕೈಗೊಳ್ಳಲು ಯೋಗ್ಯವಿರುತ್ತದೆ ಎಂದು ಅಭಿಪ್ರಾಯ ನೀಡಲಾಗಿದೆ. ಈ ಪತ್ರವನ್ನು ಉಪಯೋಗಿ ಸಂಸ್ಥೆಯವರ ಕೋರಿಕೆ ಮೇರೆಗೆ ನೀಡಲಾಗಿದ್ದು, ಮೇಲಾಧಿಕಾರಿಗಳ ಅಂತಿಮ ಒಪ್ಪಿಗೆಯ ಷರತ್ತಿಗೆ ಒಳಪಟ್ಟಿರುತ್ತದೆ.

ತಮ್ಮ ವಿಶ್ವಾಸಿ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ರಾಯಚೂರು ಅರಣ್ಯ ವಿಭಾಗ, ರಾಯಚೂರು.

ಪ್ರತಿಯನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಕಲಬುರಗಿ ವೃತ್ತ, ಕಲಬುರಗಿ ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.